ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
Email:dte.commissioner@gmail.com
ದಿನಾಂಕ:22.04.2025

**ಸುತ್ತೋಲೆ**

ವಿಷಯ: ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಬೆಂಗಳೂರು ನೋಡಲ್ ಕೇಂದ್ರಕ್ಕೆ ರವಾನಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/03/ಇಸಿಎಸ್(1)/2025 ದಿನಾಂಕ: 17.04.2025

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯನ್ವಯ ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ C-15 ಥಿಯರಿ ಪರೀಕ್ಷೆಗಳು **ದಿನಾಂಕ: 28.04.2025** ರಿಂದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಾತ್ರ ಮತ್ತು C-20 ಪಠ್ಯಕ್ರಮದ ಥಿಯರಿ ಪರೀಕ್ಷೆಗಳು **ದಿನಾಂಕ: 05.05.2025** ರಿಂದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳಲ್ಲಿ (ಬೇರೆ ಪರೀಕ್ಷಾ ಕೇಂದ್ರಗಳಿಗೆ ಜೋಡಣೆಯಾದ ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಹೊರತುಪಡಿಸಿ) ಪ್ರಾರಂಭವಾಗಲಿವೆ.

ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳು, ಆಯಾ ಪರೀಕ್ಷಾ ದಿನಗಳ ಪ್ರತಿ ಅಧಿವೇಶನಗಳ (Forenoon & Afternoon) ಉತ್ತರ ಪತ್ರಿಕೆಗಳನ್ನು ರವಾನಿಸಬೇಕಾದ ನೋಡಲ್ ಮೌಲ್ಯಮಾಪನ ಕೇಂದ್ರದ ಅಂಚೆ ವಿಳಾಸ ಈ ಕೆಳಕಂಡಂತಿದೆ.

**ಶ್ರೀ ರವಿಶಂಕರ್ ಸಿ.ವಿ. ಪ್ರಿನ್ಸಿಪಾಲರು**
**ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್, ಶೇಷಾದ್ರಿ ರಸ್ತೆ,**
**ಬೆಂಗಳೂರು-560001 ಮೊ.ಸಂ: 9448249557**

ಮೇಲ್ಕಂಡ ವಿಳಾಸವನ್ನು **ಬಿಟಿಇಲಿಂಕ್ಸ್** ನ Address Tag ನಲ್ಲಿಯೂ ಕೂಡ ಪ್ರಕಟಿಸಲಾಗುವುದು. ಅದರಂತೆ ಪ್ರತಿ ಪರೀಕ್ಷಾ ದಿನದಂದು ಬೆಳಗಿನ ಅಧಿವೇಶನ (Forenoon) ಮತ್ತು ಮಧ್ಯಾಹ್ನದ ಅಧಿವೇಶನದ (Afternoon) ಥಿಯರಿ ಪರೀಕ್ಷೆಗಳು ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಅಧಿವೇಶನವಾರು ಪ್ರಶ್ನೆ ಪತ್ರಿಕೆ ಕೋಡ್ (QP Code) ಗಳಿಗೆ ಅನುಗುಣವಾಗಿ ಸೂಚಿಸಲಾಗುವ Address Tag ನಲ್ಲಿ ಮುದ್ರಿತವಾಗಿರುವ ಮೇಲ್ಕಂಡ ಅಂಚೆ ವಿಳಾಸಕ್ಕೆ SEALED BUNDLE ಮಾಡಿ ವಿಮೆಯೊಂದಿಗೆ REGISTERED PARCEL ಮುಖಾಂತರ ನೇರವಾಗಿ ಬೆಳಗಿನ ಅಧಿವೇಶನದ ಉತ್ತರ ಪತ್ರಿಕೆಗಳನ್ನು ಬೆಳಗ್ಗೆ ಹಾಗೂ ಮಧ್ಯಾಹ್ನದ ಅಧಿವೇಶನದ ಉತ್ತರ ಪತ್ರಿಕೆಗಳನ್ನು ಮಧ್ಯಾಹ್ನವೇ ತಪ್ಪದೇ ರವಾನಿಸಲು ಸೂಚಿಸಲಾಗಿದೆ.

**ವಿಶೇಷ ಸೂಚನೆ:**

- Suspected Malpractice (SMP) ಆಗಿರುವ ಉತ್ತರ ಪತ್ರಿಕೆ/ಗಳನ್ನು Booklets Cover ನಲ್ಲಿ ಹಾಕಬಾರದು
- **SMP ಉತ್ತರ ಪತ್ರಿಕೆಗಳ Head Slips ಗಳನ್ನು ಹರಿಯಬಾರದು. SMP ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಬೇರೆ ಕವರ್‌ನಲ್ಲಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಇಟ್ಟು ಪ್ರತ್ಯೇಕ ಪ್ಯಾಕೆಟ್ ಮಾಡಿ "ಶ್ರೀ ಜಿ.ಶ್ರೀಕಾಂತ್, ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳ, ಅರಮನೆ ರಸ್ತೆ, ಬೆಂಗಳೂರು-560001" ಈ ವಿಳಾಸಕ್ಕೆ ವಿಮಾ ಅಂಚೆ ಮೂಲಕ ಕಳುಹಿಸಲು ತಿಳಿಸಲಾಗಿದೆ. ಸದರಿ ಪ್ಯಾಕೆಟ್‌ಗಳ ಮೇಲೆ "SMP" ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.**
- ಯಾವುದೇ ಕವರ್/ಬಂಡಲ್ ಮೇಲೆ CONTENT SLIP ಅಂಟಿಸುವ ಅಗತ್ಯವಿಲ್ಲ ಮತ್ತು ಯಾವುದೇ ಕವರ್/ಬಂಡಲ್ ಒಳಗೆ ಹಾಗೂ ಉತ್ತರಪತ್ರಿಕೆ ಬುಕ್‌ಲೆಟ್ ಕವರ್ ಗಳಲ್ಲಿ ATS TAG SHEET ಹಾಕುವ ಅಗತ್ಯವಿಲ್ಲ. OUTER COVER ಗಳನ್ನು ಉಪಯೋಗಿಸಬಾರದು, ಅರಗು ಮೊಹರು ಮಾಡುವಾಗ ಸಂಸ್ಥೆಯ ಹೆಸರು ಅಥವಾ ಕೋಡ್‌ಗಳ ಸುಳಿವು ಇರದಂತೆ ನೋಡಿಕೊಳ್ಳುವುದು.

ಕಾರ್ಯದರ್ಶಿ

ಇವರಿಗೆ : ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ಉಪಮುಖ್ಯ ಅಧೀಕ್ಷಕರುಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರುಗಳ ಮೂಲಕ – ಅಗತ್ಯ ಕ್ರಮಕ್ಕಾಗಿ

ಪ್ರತಿ: 1. ನೋಡಲ್ ಕೋಡಿಂಗ್/ ಮೌಲ್ಯಮಾಪನ ಕೇಂದ್ರದ ನೋಡಲ್ ಅಧಿಕಾರಿಗಳು/ ಶಿಬಿರಾಧಿಕಾರಿಗಳು/ ಸಹಾಯಕ ಶಿಬಿರಾಧಿಕಾರಿಗಳು/ ಕೋಡಿಂಗ್ ಅಧಿಕಾರಿಗಳು –ಮಾಹಿತಿಗಾಗಿ
2. ಆಪ್ತಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ 3. ಆಪ್ತಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ,
4. ಆಪ್ತಶಾಖೆ, ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳ 5. ಇ- ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
6. ಕಂಪ್ಯೂಟರ್ ಕೇಂದ್ರ – ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ವಿಳಾಸಗಳ ಅಗತ್ಯ ಬದಲಾವಣೆಗಾಗಿ & ಪ್ರಕಟಿಸಲು